ಇದ್ದಕ್ಕಿದ್ದ ಹಾಗೇ ಜೋತಿಷ್ಯ ಕಲಿಯಬೇಕೆಂಬ ಬಯಕೆ ಅಪ್ಪನಿಗೆ ಅದು ಹೇಗೆ ಮೊಳೆಯಿತೋ ಗೊತ್ತಿಲ್ಲ. ಅಪ್ಪ ಮೊದಲು ಭಾರತೀಯ ವಿದ್ಯಾ ಸಂಸ್ಥೆಯವರು ನಡೆಸುತ್ತಿದ್ದ ಕ್ಲಾಸ್‌ಗಳಿಗೆ ಸೇರಿದ. ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಜೋತಿಷ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಗಳಿಸಿದ. 'ಮಾತೇ ಆಡಲ್ಲ. ಇವರದೇನು ಜೋತಿಷ್ಯ ಹೇಳ್ತಾರೋ. ನಿಮ್ಮತ್ರ ಯಾರು ಬರ್ತಾರೇ? ದಿನ ಬೆಳಗಾದರೆ ಟಿವಿಯಲ್ಲಿ ಬರುವ ಜೋತಿಷ್ಯದವರ ಚಮಕ್ಕು, ಮಾತು, ನಿಮಗೆಲ್ಲಿ ಬರಬೇಕು? ಅದು ದುಡ್ಡೂ ತಗೊಳಲ್ಲ ಅಂದ್ರೆ ಯಾರು ನಿಮ್ಮನ್ನ ನಂಬ್ತಾರೆ' ಅಂತೆಲ್ಲಾ ಅಮ್ಮ ಅಂದಾಗಲೂ ಅಪ್ಪ ತನ್ನದೇ ನಿಲುವಿಗೆ ಬದ್ಧನಾದ. ಅಪ್ಪನ ನಿಖರವಾದ ಲೆಕ್ಕ, ಅಪಾರ ಜ್ಞಾನದಿಂದ ದಿನದಿಂದ ದಿನಕ್ಕೆ ಅಪ್ಪ ಬಿಡುವಿಲ್ಲದವನಾದ. ತಾನು ಮಾಡುವ ಪ್ರತಿ ಕೆಲಸವನ್ನು ಆತ ತಪಸ್ಸಿನಂತೆ ಮಾಡುತ್ತಿದ್ದ.

'ಪಾರ್ಶ್ವನಾಥ..' ಓ.ಟಿ. ನರ್ಸ್ ಕರೆಯುತ್ತಿದ್ದಂತೆ ನನ್ನೆಲ್ಲಾ ಯೋಚನಾ ಲಹರಿ ಅರ್ಧಕ್ಕೆ ತುಂಡರಿಸಿತು. ಓ.ಟಿ.ಯಿಂದ ನನ್ನ ಗಂಡ ಆತಂಕದಿಂದಲೇ ಹೊರಬಂದು 'ಪದ್ದು, ಇದಕ್ಕೆ ಸಹಿ ಬೇಕು. ಅಪ್ಪನ ಸ್ಥಿತಿ ತುಂಬಾ ಕ್ರಿಟಿಕಲ್ ಆಗಿದೆ. ಡಾಕ್ಟರ್ ಅಂದುಕೊಂಡಿದ್ದಕ್ಕಿಂತ ಈ ಕೇಸ್ ಕಾಂಪ್ಲಿಕೇಟೆಡ್ ಆಗಿದೆ. ಅವರು ತುಂಬಾ ಕಷ್ಟ ಪಡ್ತಾ ಇದ್ದಾರೆ. ಟೇಬಲ್ ಮೇಲೆ ಏನು ಬೇಕಾದರೂ ಆಗಬಹುದು. ಧೈರ್ಯ ತಂದುಕೋ. ಪ್ರಸಾದ್ ಸಹಿ ಬೇಕು ಎಲ್ಲಿ ಅವನು?' ಪ್ರಶ್ನಿಸಿದರು. ನನಗಂತೂ ಅಲ್ಲಿಯವರೆಗೂ ಹಿಡಿದಿಟ್ಟ ದುಃಖದ ಕಟ್ಟೆ ಒಡೆಯಿತು. ಅಳುತ್ತಲೇ 'ನಾನೇ ಸಹಿ ಹಾಕಬಹುದಾ' ಪ್ರಶ್ನಿಸಿದೆ. 'ಹಾಕು' ಎಂದರು. ನಾನು ಮಂಜಿನ ಕಣ್ಣಿಂದಲೇ ಸಹಿ ಹಾಕಿಕೊಟ್ಟೆ. ಅತ್ತಿಗೆ, ತಂಗಿಯ ಪರಿಸ್ಥಿತಿ ನನಗಿಂತ ಭಿನ್ನವಾಗಿರಲಿಲ್ಲ. ಅಪ್ಪ ಸತ್ತೇ ಹೋಗುತ್ತಾನಾ? ಮತ್ತೆ ಜೀವಂತವಾಗಿ ಕಾಣುವುದು ಸಾಧ್ಯವಿಲ್ಲವಾ? ಡಾಕ್ಟರ್ ಹೇಳಿದ್ದು ಅಪ್ಪನಿಗೆ ಧ್ವನಿಪೆಟ್ಟಿಗೆಯ ಕ್ಯಾನ್ಸರ್ ಆಗಿದೆ. ಅವರು ಇನ್ನು ಮುಂದೆ ಮಾತನಾಡಲಾಗುವುದಿಲ್ಲ. ಆಪರೇಶನ್ ಮಾಡಿದಾಗ ತಿಳಿಯುತ್ತೆ ಅದು ಇನ್ನೂ ಎಲ್ಲೆಲ್ಲಿ ಹರಡಿದೆಯೆಂದು. ಅವರು ಅಪ್ಪ ಸಾಯ್ತಾನೆ ಅಂತ ಹೇಳಿರಲಿಲ್ಲವಲ್ಲಾ, ಹೀಗ್ಯಾಕಾಯಿತು? ಮತ್ತೆ ಏನೇನೂ ಕೆಟ್ಟ ಯೋಚನೆಗಳು ಮನಸ್ಸಿನ ಕೊಳದಲ್ಲಿ ತೇಲಾಡಲಾರಂಭಿಸಿದವು. ಮನಸ್ಸನ್ನು ತಿಳಿಗೊಳಿಸಲು ಮತ್ತೆ ಹಳೆಯದನ್ನು ಕೆದಕಲಾರಂಭಿಸಿದೆ.

ಮೇ ಒಂದು ಕಾರ್ಮಿಕರ ದಿನಾಚರಣೆಯ ದಿನ ಹುಟ್ಟಿದ್ದ ಅಪ್ಪ ಪ್ರತಿವರ್ಷ ತನ್ನ ಹುಟ್ಟಿದ ಹಬ್ಬದಂದು ತನ್ನವರನ್ನೆಲ್ಲಾ ಸೇರಿಸಿ ಊಟ ಹಾಕಿ ಕಾರ್ಡ್ಸ್ ಆಡಿ ಮಕ್ಕಳ ನಡುವೆ ಮಕ್ಕಳಂತೆ ಖುಷಿ ಪಡುತ್ತಿದ್ದ. ತನ್ನ ಎಪ್ಪತ್ತೈದನೇ ಹುಟ್ಟುಹಬ್ಬ ಹಾಗೂ ಐವತ್ತನೇ ಮದುವೆಯ ವಾರ್ಷಿಕೋತ್ಸವವನ್ನು ತನ್ನೆಲ್ಲಾ ಬಳಗದವರನ್ನು ಸೇರಿಸಿ ವಿಜೃಂಭಣೆಯಿಂದ ಆಚರಿಸಿಕೊಂಡ. ಅಪ್ಪನ ಹುಟ್ಟುಹಬ್ಬ ಮುಗಿಸಿ ಮೂರು ತಿಂಗಳಾಗಿತ್ತು. ಒಂದು ದಿನ ಅಪ್ಪ ನನಗೆ ಫೋನ್ ಮಾಡಿದಾಗ ಅವರ ಧ್ವನಿ ಸಹಜವಾಗಿರಲಿಲ್ಲ. ನನ್ನ ವೈದ್ಯ ಗಂಡ ಅಪ್ಪನ ಮಾತಿನ ಜಾಡನ್ನು ನೋಡಿ 'ನೀವು ಧ್ವನಿ ಕಮ್ಮಿ ಆಗಿದೆ ಅಂತ ನೆಗ್ಲೆಟ್ ಮಾಡಬೇಡಿ. ಒಂದು ಸಲ ನನ್ನ ಫ್ರೆಂಡ್ ಇ.ಎನ್.ಟಿ. ಸರ್ಜನ್‌ನಲ್ಲಿ ತೋರಿಸಿ' ಎಂದರು. ಪರೀಕ್ಷಿಸಿದ ಸರ್ಜನ್ ಅದಕ್ಕೊಂದು ನಾಮಕರಣ ಮಾಡಿದರು. 'ವೋಕಲ್ ಕಾರ್ಡ್ ಪ್ಯಾರಾಲೀಸಿಸ್' ಅಂತ. 'ಲಕ್ವ ದೇಹಕ್ಕೆ ಹೊಡೆಯುವಂತೆ ಧ್ವನಿಪೆಟ್ಟಿಗೆಗೂ ಆಗುತ್ತೆ. ಆಪರೇಶನ್ ಮಾಡಿದರೆ ಸರಿ ಹೋಗುತ್ತೆ ಅಂತ ಭರವಸೆ ಕೊಡಲು ಆಗಲ್ಲ. ಅದರಲ್ಲೂ ಈ ವಯಸ್ಸಿಗೆ ಧ್ವನಿ ಜೋರಾಗಿ ಬೇಕಾ ಯಜಮಾನರೇ' ಅಂತ ಪ್ರಶ್ನಿಸಿದಾಗ ಅಪ್ಪ 'ಹಾಗೇನಿಲ್ಲ' ಅಂತ ಪೆಚ್ಚುಮೋರೆ ಹಾಕಿ ಹೇಳಿದ್ದ. ಹೀಗೆ ಮತ್ತೆ ಮೂರು ತಿಂಗಳು ಉರುಳಿದ್ದವು. ಅಪ್ಪನ ಬಳಿ ಮಾತಾಡಿದವರೆಲ್ಲಾ 'ನಿಮ್ಮ ದನಿಗೆ ಏನಾಗಿದೆ' ಅಂತ ಕೇಳಿ ಕೇಳಿ ಬೇಸತ್ತಿದ್ದ. ಅವರಿವರು ಕೊಟ್ಟ ವೈದ್ಯರ ಬಳಿಯೂ ತೋರಿಸಿ ಬಂದಿದ್ದ. 'ಹೀಗೆ ದನಿ ಕಡಿಮೆಯಾಗುವುದು ಒಳ್ಳೆ ಲಕ್ಷಣ ಅಲ್ಲ. ನಿಮ್ಮಪ್ಪನನ್ನು ಬೇರೆ ಸ್ಪೆಷಲಿಸ್ಟ್‌ಗೆ ತೋರಿಸೋಣ' ಅಂತ ವೈದ್ಯನ ಸಹಜ ಆತಂಕದಿಂದ ಅಂದು ನನ್ನ ಗಂಡ ಹೇಳಿದ್ದನ್ನು ಅಮ್ಮನಿಗೆ ವರ್ಗಾಯಿಸಿದ್ದೆ.

ಮತ್ತೊಮ್ಮೆ ಅಪ್ಪ ಬೆಂಗಳೂರಿಗೆ ಬಂದಾಗ ಅವರನ್ನು ಇಲ್ಲಿನ ಮತ್ತೊಬ್ಬ ಪ್ರಸಿದ್ಧ ವೈದ್ಯರಿಗೆ ತೋರಿಸಲು ಕರೆದುಕೊಂಡು ಹೋದೆ. ಅದೊಂದು ಕಿವಿ, ಮೂಗು, ಗಂಟಲಿಗಾಗಿಯೇ ಇರುವ ಸ್ಪೆಷಲ್ ಆಸ್ಪತ್ರೆ. ಡಾಕ್ಟರ್ ಕರೆದಾಗ ಒಳಹೋದೆವು. ಸುಮಾರು ನಲವತ್ತರ ಆಸುಪಾಸಿನ ಎತ್ತರ ನಿಲುವಿನ ವ್ಯಕ್ತಿ, ಅಚ್ಚ ಬಿಳಿ ಬಣ್ಣದ ಕೋಟು, ತಲೆಯ ಮೇಲೊಂದು ಪರೀಕ್ಷೆಯ ಸಾಧನ, ರಿಪೋರ್ಟ್‌ಗಳನೆಲ್ಲಾ ಕೂಲಂಕುಶವಾಗಿ ಪರಿಶೀಲಿಸಿದವರು. 'ಗಂಟಲಲ್ಲಿ ಗೆಡ್ಡೆಯಾಗಿದೆ. ಅದು ಕ್ಯಾನ್ಸರ್ ಗೆಡ್ಡೆಯಾ ಅಲ್ಲವಾ ಅಂತ ತಿಳಿಯಲು ಎಂಆರ್‌ಐ ಮಾಡಿಸಿ ಮುಂದೆ ನೋಡೋಣ' ಎಂದರು. ಅಲ್ಲಿಯವರೆಗೂ ಎಂಥದ್ದೋ ಗಂಟಲಿಗೆ ಸಂಬಂಧಿಸಿದ ಕಾಯಿಲೆಯಿರಬೇಕು ಅಂತ ನಂಬಿದ್ದ ನನಗೆ ಮೊದಲ ಬಾರಿ ಕ್ಯಾನ್ಸರ್ ಪದವನ್ನು ಕೇಳಿ ಭೂಮಿ ಬಾಯಿಬಿಟ್ಟಂತಾಯಿತು. ಅಪ್ಪನ ಮುಖವೂ ಬಿಳಿಚಿಕೊಂಡಿತು. ಇದನ್ನು ಗಮನಿಸಿದ ಡಾಕ್ಟರ್ 'ನೀವು ಸಿಗರೇಟ್ ಸೇದಲ್ಲ, ಕುಡಿಯಲ್ಲ, ಜೋರಾಗಿ ಕಿರುಚಾಡಲ್ಲ, ತಂಬಾಕು ತಿನ್ನಲ್ಲ. ಹಾಗಾಗಿ ಕ್ಯಾನ್ಸರ್ ಇರಲಿಕ್ಕಿಲ್ಲ. ಈ ಪರೀಕ್ಷೆ ಮಾಡಿಸಿ ಬನ್ನಿ ಮುಂದಿನದನ್ನು ನೋಡೋಣ' ಎಂದರು. ಎಂಆರ್‌ಐ ಮಾಡಿಸಿದ್ದಾಯಿತು. ರಿಪೋರ್ಟ್ ನೋಡಿದ ಡಾಕ್ಟರು 'ಇದರಲ್ಲಿ ಥರ್ಡ್ ಸ್ಟೇಜ್ ಅಂತ ತೋರಿಸ್ತಿದೆ. ಯಾಕೆ ಮೊದಲೇ ತೋರಿಸಿರಲಿಲ್ಲವಾ?' ಅಂತ ಪ್ರಶ್ನಿಸಿದರು. ಈ ಪ್ರಶ್ನೆ ಕೇಳುತ್ತಿದ್ದಂತೆ ಅಪ್ಪ, ನಾನು ಏನು ಮಾತಾಡಬೇಕೆಂತಲೇ ತಿಳಿಯದೆ ಕಲ್ಲಾಗಿ ಕುಳಿತೆವು. ಇದರ ಸೂಕ್ಷ್ಮತೆಯನ್ನು ಅರಿತ ಡಾಕ್ಟರೆ ಮುಂದುವರೆದು 'ಕೆಲವು ಸಲ ರಿಪೋರ್ಟ್‌ಗಳನ್ನೂ ನಂಬಲು ಆಗಲ್ಲ. ಬಯಾಪ್ಸಿ ಮಾಡಿ ನೋಡಿದ್ರೆ ಮಾತ್ರ ಕ್ಯಾನ್ಸರ್ ಹೌದೋ ಅಲ್ಲವೋ ಅಂತ ನಿಖರವಾಗಿ ಹೇಳಲು ಸಾಧ್ಯ. ಅದನ್ನು ಮಾಡಿಸಿ ಬಿಡಿ' ಎಂದರು. 'ನೀರಿಗೆ ಬಿದ್ದವನಿಗೆ ಚಳಿಯೇನು ಬಿಸಿಲೇನು' ಅಂತ ಭಾರವಾದ ಹೆಜ್ಜೆಯಿಡುತ್ತ ಅಲ್ಲಿಂದ ಹೊರಬಂದೆವು. ಅಪ್ಪನನ್ನು ದಿಟ್ಟಿಸಿ ನೋಡುವ ಧೈರ್ಯವಾಗದೆ ನೋವು ನುಂಗಿ ನನಗೆ ತಿಳಿದ ಏನೇನೋ ಸಾಂತ್ವನದ ಮಾತುಗಳನ್ನಾಡಿದೆ. ಅಪ್ಪ ಮೌನವಾಗಿದ್ದ. ಅವನ ಮನಸ್ಸಿನಲ್ಲಿ ಏನೇನು ಮಥಿಸುತ್ತಿತ್ತೋ?

ಅಪ್ಪ ಬಯಾಪ್ಸಿ ಮಾಡಿಸಿಕೊಂಡ. ಅದರಲ್ಲಿ ಕ್ಯಾನ್ಸರ್ ಅಲ್ಲ ಅಂತ ಬಂತು. ಅದನ್ನು ಕೇಳಿದ ಕೂಡಲೇ 'ಮುಳುಗುತ್ತಿರುವವನಿಗೆ ಒಂದು ಹುಲ್ಲು ಕಡ್ಡಿ' ಸಿಕ್ಕಂತಾಯಿತು. ಅಪ್ಪನ ಬಳಿ ಓಡಿ ಹೋಗಿ ವಿಷಯ ತಿಳಿಸಿದೆ. ಅಪ್ಪನ ಮುಖ ಅರಳಿತು. ಅವರ ಚಿಂತೆಯ ಕಾರ್ಮೋಡ ಸರಿಯಿತು. ಆ ದಿನ ಮಳೆ ಮೋಡ ಹಗುರಾದಂತೆ ಮನೆಯವರೆಲ್ಲರೂ ನೆಮ್ಮದಿಗೊಂಡೆವು. ಆದರೆ ಆ ನೆಮ್ಮದಿ ಬಹಳ ದಿನ ಉಳಿಯಲಿಲ್ಲ. ಬಯಾಪ್ಸಿ ರಿಪೋರ್ಟ್ ಅನ್ನು ಮತ್ತೆ ಮೂರು, ನಾಲ್ಕು ಕ್ಯಾನ್ಸರ್ ಆಸ್ಪತ್ರೆಗಳ ಲ್ಯಾಬ್‌ನಲ್ಲಿ ಪರೀಕ್ಷಿಸಲು ಹೇಳಿದರು. ಎಲ್ಲಾ ಕಡೆ ಅದೇ ಉತ್ತರ. ಡಾಕ್ಟರ್ ತಲೆಕೆಡಿಸಿಕೊಂಡರು. ಮತ್ತೊಂದು ಮಗದೊಂದು ರಿಪೋರ್ಟ್‌ಗಳನ್ನು ಹಿಡಿದು ಸೂತ್ರ ಹರಿದ ಗಾಳಿಪಟದಂತೆ ಅಲೆದಾಡಿದ್ದೇ ಅಲೆದಾಡಿದ್ದು. ಇನ್ನೊಂದು ಬಯಾಪ್ಸಿ ಮಾಡಿಬಿಡೋಣ ಇದೊಂದು ಅಪರೂಪದ ಕೇಸ್ ಎಂದ ವೈದ್ಯರ ಮಾತಿಗೆ ಅಪ್ಪ ನಿರಾಕರಿಸಿದ. ಕೊನೆಯ ಪ್ರಯತ್ನ ಎಂಬಂತೆ 'ನೋಡಿ ಬಯಾಪ್ಸಿ ಏನೋ ಹೇಳುತ್ತೇ, ಎಂ.ಆರ್.ಐ ಬೇರೆ ಹೇಳುತ್ತೆ. ಹಾಗಾಗಿ ಇದೆಯೋ ಇಲ್ಲವೋ ಅನ್ನೋದನ್ನು ಕನ್‌ಫರ್ಮ್ ಮಾಡಿಕೊಳ್ಳುವುದು ವಾಸಿ'. ನನ್ನ ಗಂಡನ ಮಾತಿಗೆ ಅಪ್ಪ ಸೋತು ತಲೆಯಾಡಿಸಿದ.

ಅದೊಂದು ಸಂಪೂರ್ಣ ಕ್ಯಾನ್ಸರ್ ಪೇಶೆಂಟ್‌ಗಳಿಗಾಗಿಯೇ ಇರುವ ಖಾಸಗಿ ಆಸ್ಪತ್ರೆ. ಅಲ್ಲೆಲ್ಲಾ ಕ್ಯಾನ್ಸರ್‌ನಿಂದಾಗಿ ತಲೆಕೂದಲೆಲ್ಲಾ ಉದುರಿ ಹೋಗಿರುವ ಅನೇಕ ಹೆಂಗಸರು ತಲೆಗೆ ಬಟ್ಟೆ ಸುತ್ತಿಕೊಂಡು ಓಡಾಡುತ್ತಿರುವವರು, ಅವರನ್ನು ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸಿದರೆ ಹುಬ್ಬು, ಕಣ್ಣರೆಪ್ಪೆಯೆಲ್ಲಾ ಉದುರಿ ಕಿಮೋಥೆರಪಿ ತೆಗೆದುಕೊಂಡದ್ದಕ್ಕೆ ಸಾಕ್ಷಿಯಾಗಿದ್ದರು. ಕೆನ್ನೆ, ಕುತ್ತಿಗೆ ಸೀಳಿಸಿಕೊಂಡು ಭಯಾನಕವಾಗಿ ಕಾಣುತ್ತಿದ್ದ ರೋಗಿಗಳು, ವೀಲ್ ಚೇರ್‌ಗಳಲ್ಲಿ ರೋಗಿಗಳನ್ನು ಒಳಗಿನಿಂದ ಕರೆತಂದು ಹೊರಗೆ ಕಳುಹಿಸುತ್ತಿರುವವರು, ಶಬ್ದ ಮಾಡುತ್ತಾ ಬರುವ ಅಂಬುಲೆನ್ಸ್‌ಗಳಲ್ಲಿದ್ದ ರೋಗಿಗಳನ್ನು ನೂರಾರು ಪ್ರಶ್ನೆಗಳೊಂದಿಗೆ ಕುತೂಹಲದಿಂದ ಬರಮಾಡಿಕೊಳ್ಳುವವರು, ಇದೆಲ್ಲಾ ಮಾಮೂಲಿ ಎನ್ನುವಂತೆ ನೀಲಿ ಸಮವಸ್ತ್ರ ಧರಿಸಿ ಓಡಾಡುತ್ತಿರುವ ಸಿಬ್ಬಂದಿಗಳು. ಆಗಾಗ ಹೊರ ಬರುವ ಡಾಕ್ಟರ್‌ಗಳನ್ನು ಮುತ್ತುತ್ತಾ ಬರುವ ರೋಗಿಗಳು, ಸಂಬಂಧಪಟ್ಟವರು, ಆಸ್ಪತ್ರೆ ಕ್ಯಾಂಟೀನ್‌ನಿಂದ ಬರುತ್ತಿರುವ ಪರಿಮಳದೊಂದಿಗೆ ನೆಲಕ್ಕೆ ಹಾಕುವ ಫಿನಾಯಿಲ್ ಸೇರಿಕೊಂಡು ಅಲ್ಲೊಂದು ವಿಚಿತ್ರ ಘಮಲನ್ನು ಹರಡಿತ್ತು. ಸಾಯುವವರು ನಾಳೆ ಸತ್ತರೂ ಬದುಕುವುದಕ್ಕಾಗಿಯಾದರೂ ಈ ದಿನ ತಿನ್ನಲೇಬೇಕೆಂಬುವಂತೆ ತಿನ್ನುತ್ತಿರುವ ಜನ, ಇವರನ್ನೆಲ್ಲಾ ದಾಟಿ ನಾನು ರಿಸೆಪ್ಷನ್ ಕೌಂಟರ್‌ಗೆ ಹೋಗಿ ಅಪ್ಪನ ಅಪಾಯಿಂಟ್‌ಮೆಂಟ್ ಬಗ್ಗೆ ವಿಚಾರಿಸಿದೆ. ಆಕೆ ತನ್ನ ಮುಂದಿದ್ದ ಕಂಪ್ಯೂಟರ್‌ನಲ್ಲಿ ಚೆಕ್ ಮಾಡಿ ಯಾವ ಕಡೆ